# ಆತ್ಮೀಯ-25 ಪ್ರಯುಕ್ತ ಬೃಹತ್ ರಕ್ತದಾನ ಶಿಬಿರ

■ ವಿಜಯವಾಣಿ ಸುದ್ದಿಜಾಲ ಮೈಸೂರು

ನಗರದ ಬನ್ನೂರು ರಸ್ತೆಯ ಎಟಿಎಂಇ ಇಂಜಿನಿಯರಿಂಗ್ ಕಾಲೇಜು ವಾರ್ಷಿಕೋತ್ಸವ 'ಆತ್ಮೀಯ-25' ಪ್ರಯುಕ್ತ ಗುರುವಾರ ಕಾಲೇಜಿನ ಎನ್ಎಸ್ಎಸ್ ಘಟಕ, ಬೆಂಗಳೂರಿನ ರೋಟರಿ ದಕ್ಷಿಣ, ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ವತಿಯಿಂದ ಬೃಹತ್ ರಕ್ತದಾನ ಹಾಗೂ ಹೃದಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷೆ ಪಲ್ಲವಿ ಅರುಣ್ ಕುಮಾರ್ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿ, ರಕ್ತದಾನವೆಂಬುದು ಅತ್ಯಂತ ಶ್ರೇಷ್ಠದಾನವಾಗಿದೆ. ನಾವು ನೀಡುವ ಸ್ವಲ್ಪ ಪ್ರಮಾಣದ ರಕ್ತದಿಂದ ಅಮೂಲ್ಯವಾದ ಜೀವಗಳನ್ನು ಕಾಪಾಡ ಬಹುದು, ಎಟಿಎಂಇ ಕಾಲೇಜು ಹಮ್ಮಿಕೊಂಡಿರುವ ಸಾಮಾಜಿಕ ಕಳಕಳಿಯ ಈ ಕಾರ್ಯಕ್ರಮ ಅತ್ಯಂತ ಶ್ಲಾಘನೀಯ ಎಂದರು.ಇದೇ ಸಂದರ್ಭ ಬೆಂಗಳೂರಿನ ರೋಟರಿ ದಕ್ಷಿಣ ವತಿಯಿಂದ ಸಿವಿಲ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿನಿ ಸೃಷ್ಟಿ ಅವರಿಗೆ 10,000 ರೂ.ಗಳ ಆರ್ಥಿಕ ನೆರವಿನ ಚೆಕ್ ಹಸ್ತಾಂತರಿಸಲಾಯಿತು.ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ಎಲ್. ಬಸವರಾಜ್, ಆಡಳಿತಾಧಿಕಾರಿ ಡಾ.ಸಚ್ಚಿದಾನಂದಮೂರ್ತಿ, ಡೀನ್ ಡಾ.ಶ್ರೀನಿವಾಸ, 'ಆತ್ಮೀಯ-2025' ಮುಖ್ಯಸ್ಥ ಡಾ.ಪುಟ್ಟೇಗೌಡ, ಶಿಬಿರದ ಸಂಯೋಜಕರಾದ ಪ್ರೊ.ಎ.ಎನ್. ರುದ್ರೇಶ್, ಡಾ.ಮುರಳೀಧರ್, ಪ್ರೊ.ರಘು, ಪ್ರೊ.ಶ್ರುತಿ, ಪ್ರೊ. ಕೀರ್ತಿಕುಂಬಾರ್, ಪ್ರೊ.ಅನುಪಮಾಶೆಟ್ಟರ್, ಪ್ರೊ..ಜಸ್ಲೀನ್, ರೆಡ್‌ಕ್ರಾಸ್‌ನ ಡಾ. ಶ್ಯಾಂಸುಂದರ್ ಇದ್ದರು.

■ ಎಟಿಎಂಇ ಇಂಜಿನಿಯರಿಂಗ್ ಕಾಲೇಜು ವಾರ್ಷಿಕೋತ್ಸವ

ವಿಜಯವಾಣಿ ಚಿತ್ರ



ನಗರದ ಬನ್ನೂರು ರಸ್ತೆಯ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ವಾರ್ಷಿಕೋತ್ಸವ ಪ್ರಯುಕ್ತ ರಕ್ತದಾನ ಶಿಬಿರ ನಡೆಯಿತು.